

ಮದುವೆ ಆದವರು. ನಂತರದ ದಿನಗಳಲ್ಲಿ ಜನ್ಮಕೊಟ್ಟ ಕುಟುಂಬದ ಪ್ರೀತಿಯ ಮಗಳಾಗಿ, ಸೇರಿದ ಕುಟುಂಬಕ್ಕೆ ಪ್ರೀತಿಯ ಸೊಸೆಯಾಗಿ, ಎಲ್ಲರ ಗೌರವವನ್ನು ಸಂಪಾದಿಸಿಕೊಂಡವರು ಕಮಲಾ. ಬದುಕಿನ ಕೊನೆ ಗಳಿಗೆವರೆಗೂ ಎರಡೂ ಕಡೆಯ ಬಾಂಧವ್ಯವನ್ನು ಉಳಿಸಿಕೊಂಡವರು ಹಂಪನಾ ದಂಪತಿ.

ಇವರಿಬ್ಬರ ಮದುವೆಯ ಪೂರ್ವ ಕಥೆಯನ್ನು ಅವರಿಬ್ಬರ ಸಹಪಾಠಿ, ಕೊನೆಯವರೆಗೂ ಅವರಿಗೆ ಆತ್ಮೀಯರಾಗಿದ್ದ ಪ್ರೊ. ಎಂ.ಎಚ್. ಕೃಷ್ಣಯ್ಯನವರು ತುಂಬಾ ಸ್ವಾರಸ್ಯಕರವಾಗಿ ಹೇಳುತ್ತಿದ್ದರು. ಹಂಪನಾ–ಕಮಲಾ ಅವರ ಮದುವೆಯಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ ಕೃಷ್ಣಯ್ಯನವರೂ ಒಬ್ಬರಾಗಿದ್ದರು. 'ಆನರ್ಸ್ ಮತ್ತು ಎಂ.ಎ. ಓದುವಾಗ ನಾವೆಲ್ಲಾ ಸಹಪಾಠಿಗಳು. ಹಂಪನಾ ಈಗಿನ ವಿದ್ಯಾರ್ಥಿಗಳಂತೆ ಸ್ವಲ್ಪ ಸ್ಪೀಡ್ ಆಗೇ ಇದ್ದರು! ಆದರೆ, ಆಗಲೇ ಕಮಲಾ ಅವರ ದೃಢ ನಿಲುವು, ಮಾತು, ಸ್ವಭಾವ ಹಂಪನಾ ಅವರನ್ನು ಎಚ್ಚರಿಸುವಂತೆ ಇರುತ್ತಿತ್ತು' ಎಂದು ಹೇಳುತ್ತಾ ಅವರಿಬ್ಬರ ಪ್ರೇಮ ಪ್ರಸಂಗದ ಸಾಕಷ್ಟು ಸಂಗತಿಗಳನ್ನು ತಮಾಷೆಯಾಗಿ ಹೇಳುತ್ತಿದ್ದರು.

ನಾನು 'ಕುವೆಂಪು ಪ್ರತಿಷ್ಠಾನ'ದ ಸಮಕಾರ್ಯದರ್ಶಿ ಆದಮೇಲೆ ಹಂಪನಾ ದಂಪತಿ ಪರಿಚಯಗೊಂಡರು. ಆ ನಂತರ ಹಂಪನಾ ದಂಪತಿ, ಎಂ.ಎಚ್. ಕೃಷ್ಣಯ್ಯ, ನಾವುಗಳೆಲ್ಲಾ ಸೇರಿದಾಗ, ಅವರೆಲ್ಲ ನನಗಿಂತ ತುಂಬಾ ಹಿರಿಯರಾದರೂ, ನಾವುಗಳೆಲ್ಲ ಸಲಿಗೆಯಿಂದಲೇ ಇರುತ್ತಿದ್ದೆವು. ಅವೆಲ್ಲವೂ ಸದಾ ನೆನಪಿಸಿಕೊಳ್ಳುವ ಗಳಿಗೆಗಳು.

ಕಮಲಾ ಅವರು 'ಕುವೆಂಪು ಪ್ರತಿಷ್ಠಾನ'ದ ಸ್ಥಾಪಕ ಸದಸ್ಯರಾಗಿ (1992ರಿಂದ) ಈವರೆಗೂ ಕ್ರಿಯಾಶೀಲವಾಗೇ ಇದ್ದವರು. ಕುಪ್ಪಳಿ ಕೇಂದ್ರ ಕಟ್ಟುವುದರಲ್ಲಿ ದೀರ್ಘಕಾಲ ಕೈಜೋಡಿಸಿದವರು. ಪ್ರತೀ ಸಭೆಗೂ ಬರುತ್ತಿದ್ದರು. ನಾಮಕಾವಸ್ತೆಗೆ ಬರದೇ, ಸಭೆಯಲ್ಲಿ ತುಂಬಾ ಜವಾಬ್ದಾರಿಯುತವಾಗಿ ಸಲಹೆ–ಸೂಚನೆಗಳನ್ನು ಕೊಡುತ್ತಿದ್ದರು. ನಾವುಗಳು ಸ್ಥಳೀಯವಾಗಿ ಕಟ್ಟುವಿಕೆಯಲ್ಲಿ ತೊಡಗಿಕೊಂಡಾಗ,